# ಸಮೀಕ್ಷಾ

## ಆತ್ಮವಿಶ್ವಾಸದ ಜೊತೆಗೆ ಹೊಸತನದತ್ತ ನಡಿಗೆ

■ ಸುಮಲತಾ ಎನ್.



‘ಮೀನಾಕ್ಷಿ ಮದುವೆ’, ‘ಸುಬ್ಬಲಕ್ಷ್ಮಿ ಸಂಸಾರ’ ಧಾರಾವಾಹಿಗಳ ಮೂಲಕ ಮನೆಮಾತಾಗಿದ್ದ ನಟಿ ಸಮೀಕ್ಷಾ, ಸಿನಿಮಾರಂಗದಲ್ಲಿ ಅದೃಷ್ಟ ಪರೀಕ್ಷೆಗೆ ಒಡ್ಡಿಕೊಂಡಿದ್ದಾರೆ. ಅವರ ನಟನೆಯ ‘ರಾನಿ’ ಸಿನಿಮಾ ಈಚೆಗೆ ತೆರೆಕಂಡಿದ್ದು, ಸಿನಿಮಾಗೆ ಸಿಕ್ಕ ಸ್ಪಂದನ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ‘ರಾಶಿ’ ಎಂಬ ಚಿತ್ರಕ್ಕೂ ಬಣ್ಣ ಹಚ್ಚುತ್ತಿರುವ ಅವರು, ‘ಸುಧಾ’ದೊಂದಿಗೆ ಮಾತು ಹಂಚಿಕೊಂಡಿದ್ದಾರೆ.

◆ ಧಾರಾವಾಹಿ ಮೂಲಕ ಪರಿಚಿತರಾದವರು ನೀವು. ಕಿರುತೆರೆ ನಂಟು ಬೆಸೆದಿದ್ದು ಹೇಗೆ?

ನಾನು ಮೂಲತಃ ಶಿವಮೊಗ್ಗದವಳು. ಬೆಳೆದಿದ್ದು, ಓದಿದ್ದು ಎಲ್ಲ ಅಲ್ಲೇ. ಪದವಿ ಸಮಯದಲ್ಲಿ ಪಾಕೆಟ್ ಮನಿಗಾಗಿ ಆ್ಯಂಕರಿಂಗ್ ಮಾಡುತ್ತಿದ್ದೆ. ಆ ಸಮಯದಲ್ಲೇ ಇ–ಕಾಮರ್ಸ್ ಜಾಹೀರಾತು ನೀಡುವ ಅವಕಾಶಗಳೂ ಬಂದವು. ಬೆಂಗಳೂರಿಗೆ ಹೆಚ್ಚು ಓಡಾಡುತ್ತಿದ್ದ ಆ ಸಮಯದಲ್ಲಿ ಸುವರ್ಣ ಚಾನಲ್‌ನವರು ಒಂದು ಕಾರ್ಯಕ್ರಮ ಮಾಡುತ್ತಿದ್ದರು. ಅದರಲ್ಲಿ ಪಾಲ್ಗೊಂಡೆ. ನಂತರ ಆಡಿಷನ್ ಕೊಡಲು ಆರಂಭಿಸಿದೆ. ಆಕಸ್ಮಿಕವಾಗಿ ನಟನೆಯ ಹಾದಿ ಹಿಡಿದೆ. ಮೊದಮೊದಲು ಯಾವುದರಲ್ಲೂ ಆಯ್ಕೆಯಾಗಿರಲಿಲ್ಲ. ಕೆಲವು ದಿನಗಳ ನಂತರ ‘ಮೀನಾಕ್ಷಿ ಮದುವೆ’ ಎಂಬ ಧಾರಾವಾಹಿಯಲ್ಲಿ ಲೀಡ್ ಪಾತ್ರ ಸಿಕ್ಕಿತು. ನಂತರ ‘ಸುಬ್ಬಲಕ್ಷ್ಮಿ ಸಂಸಾರ’ದಲ್ಲಿ ನೆಗೆಟಿವ್ ಪಾತ್ರ ನಿಭಾಯಿಸಿದೆ, ‘ಮೂರು ಗಂಟು’ ಧಾರಾವಾಹಿಯಲ್ಲಿ ಡಬಲ್ ರೋಲ್‌ನಲ್ಲಿ ಕಾಣಿಸಿಕೊಂಡೆ. ಹೀಗೆ ಕಿರುತೆರೆ ನನ್ನ ಜೀವನಕ್ಕೆ ಟರ್ನಿಂಗ್ ಪಾಯಿಂಟ್ ಆಯಿತು.

◆ ಕಿರುತೆರೆ ಕಲಿಸಿಕೊಟ್ಟ ಪಾಠ?

ಪಾಸಿಟಿವ್, ನೆಗೆಟಿವ್ ಎರಡೂ ರೀತಿಯ ಅನುಭವಗಳಾಗಿವೆ. ಯಾವುದೇ ಕೆಲಸದಲ್ಲಿ ಒಂದು ಟೆಕ್ನಿಕ್ ಇರುತ್ತದೆ. ಇಲ್ಲಿ ಆ ತಂತ್ರಗಳನ್ನು ಹೇಳಿಕೊಟ್ಟವರು ಕೆಲವೇ ಮಂದಿ. ನಿಂದಿಸಿದವರ ಪಾಲು ಹೆಚ್ಚು. ಆ ಎಲ್ಲಾ ಲೆಕ್ಕಾಚಾರಗಳು ಈಗ ಬದಲಾಗಿವೆ. ಅವರ ನಿಂದನೆಗಳು ನನಗೆ ಪ್ಲಸ್ ಆಗಿವೆ. ಎಲ್ಲದರಿಂದಲೂ ಪಾಠ ಕಲಿತಿದ್ದೇನೆ. ಕಿರುತೆರೆ ಎನ್ನುವುದು ಜೀವನಕ್ಕೂ, ಸಿನಿಮಾ ಜೀವನಕ್ಕೂ ಬಹಳಷ್ಟನ್ನು ನೀಡಿದೆ.

◆ ಸಿನಿಮಾದೆಡೆಗೆ ಹೊರಳಿದ್ದು ಯಾವಾಗ?

ಮೊದಲ ಬಾರಿ ನಟಿ ರಾಗಿಣಿ ದ್ವಿವೇದಿಯವರೊಂದಿಗೆ ‘ಟೆರರಿಸ್ಟ್’ ಸಿನಿಮಾದಲ್ಲಿ ನಟಿಸಿದೆ. ಅಲ್ಲಿಂದ ನನ್ನ ಸಿನಿಮಾ ಹಾದಿ ಆರಂಭವಾಯಿತು. ಅದರ ನಂತರ ‘99’, ‘ಜೇಮ್ಸ್’ ಸಿನಿಮಾಗಳಲ್ಲಿ ಅಭಿನಯಿಸಿದೆ. ಈ ನಡುವೆ ಒಂದು ತೆಲುಗು ಸಿನಿಮಾದಲ್ಲೂ ನಟಿಸಿದ್ದೆ. ಆದರೆ ನನ್ನ ಕಲಿಕೆಯನ್ನು ಇನ್ನಷ್ಟು ಚುರುಕುಗೊಳಿಸಬೇಕೆಂದು ಮತ್ತೆ ಧಾರಾವಾಹಿಯತ್ತ ಬಂದೆ. ಡಬಲ್ ರೋಲ್‌ನಲ್ಲಿ ಕಾಣಿಸಿಕೊಂಡೆ. ಈಚೆಗೆ ‘ರಾನಿ’ ಸಿನಿಮಾದಲ್ಲಿ ನಟಿಸಿದ್ದೇನೆ.

◆ ‘ರಾನಿ’ಗೆ ಸಿಕ್ಕ ಪ್ರತಿಕ್ರಿಯೆ ಹೇಗಿತ್ತು?

ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು, ಇಂಥ ದೊಡ್ಡ ನಗರದಲ್ಲಿ, ಯಾರೂ ಗಾಡ್‌ಫಾದರ್ ಇಲ್ಲದೆ, ಬೆಂಬಲ ಇಲ್ಲದೆ ಕಷ್ಟಪಟ್ಟಿದ್ದೆ. ಹೆಣ್ಣುಮಕ್ಕಳು ಎಂದಾಕ್ಷಣ ಬೇರೆ ರೀತಿಯ ಮಾತುಗಳು ಬರುತ್ತಿದ್ದವು. ಆ ಕಷ್ಟಗಳಿಗೆ ಉತ್ತರದಂತೆ ಒಂದೊಳ್ಳೆಯ ಅವಕಾಶಕ್ಕೆ ಎದುರುನೋಡುತ್ತಿದ್ದೆ. ಅದು ‘ರಾನಿ’ ಮೂಲಕ ಬಂತು. ಈ ಸಿನಿಮಾ ಆದ ಮೇಲೆ ನನ್ನನ್ನು ಜನ ಗುರುತು ಹಿಡಿಯುತ್ತಿದ್ದಾರೆ.

ನಮ್ಮೂರಿನಲ್ಲಿ ಈಚೆಗೆ ಸಾವಿರಾರು ಜನ ಸೇರಿದ್ದ ದೊಡ್ಡ ಕಾರ್ಯಕ್ರಮವೊಂದರಲ್ಲಿ, ನನ್ನ ಸಿನಿಮಾದ, ನನ್ನ ಇಂಟ್ರೊಡಕ್ಷನ್ ಸಾಂಗ್ ಹಾಕಿದ್ದರು. ನಮ್ಮೂರಲ್ಲಿ ನನ್ನನ್ನು ಆ ರೀತಿ ಬೆಂಬಲಿಸಿದ್ದು ನನಗೆ ಬಹಳ ಖುಷಿ ಕೊಟ್ಟಿತು.

◆ ಎಂಥ ಪಾತ್ರದ ಅನ್ವೇಷಣೆಯಲ್ಲಿದ್ದೀರಿ?

ನಾನೇನು ಮಾಡಬಹುದು ಎಂಬುದನ್ನು ನನ್ನ ಕಂಫರ್ಟ್‌ನಲ್ಲೇ ನಾನು ಯೋಚಿಸಲು ಸಾಧ್ಯ. ಆದರೆ ನನ್ನನ್ನು ಅದರಿಂದಾಚೆಗೆ ತರಬಲ್ಲ ನಿರ್ದೇಶಕರು, ತಂಡಗಳು ಹೆಚ್ಚು ಸಿಗಬೇಕು. ನನ್ನಲ್ಲಿನ ಹಲವು ವೇರಿಯೇಷನ್‌ಗಳನ್ನು ಕಂಡುಕೊಳ್ಳುವ ಅವಕಾಶಗಳು ಸಿಗಬೇಕು.

◆ ಸದ್ಯ ನಿಮ್ಮ ನಟನೆಯ ಸಿನಿಮಾಗಳು?

ನಟ ಶಶಿಕುಮಾರ್ ಅವರ ಮಗ ಆದಿತ್ಯ ಶಶಿಕುಮಾರ್ ಅವರೊಂದಿಗೆ ‘ರಾಶಿ’ ಎಂಬ ಸಿನಿಮಾದಲ್ಲಿ ತೊಡಗಿಕೊಂಡಿದ್ದೇನೆ. ■

